# ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

# ADIKAVI SRI MAHARSHI VALMIKI UNIVERSITY, RAICHUR

Krishna Tunga Campus, Mantralay Road (N.H. 167), Yergera -584133, Raichur, Karnataka

**ಪರೀಕ್ಷಾ ವಿಭಾಗ**

Email: registrarevrur@gmail.com


ಸಂಖ್ಯೆ: ಅಶ್ರೀಮವಾವಿರಾ/ಪರೀಕ್ಷಾ/ಯು.ಜಿ/ಮರುಮೌಲ್ಯಮಾಪನ/2025–26/ 112 ದಿನಾಂಕ: 07.05.2025

## ಮರುಮೌಲ್ಯಮಾಪನ ಅಧಿಸೂಚನೆ

ವಿಷಯ: 2023–24 ನೇ ಸಾಲಿನ ಸ್ನಾತಕ(UG) ನಾಲ್ಕನೇ ಸೆಮಿಸ್ಟರ್‌ನ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 07.05.2025

*****

ರಾಯಚೂರು ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವಂತಹ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳಲ್ಲಿರುವ ಎಲ್ಲಾ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಎಲ್ಲಾ 2023–24 ನೇ ಸಾಲಿನ ಸ್ನಾತಕ (UG) ಕೋರ್ಸಗಳ ನಾಲ್ಕನೇ ಸೆಮಿಸ್ಟರ್‌ನ ಪರೀಕ್ಷಾ ಫಲಿತಾಂಶವನ್ನು ಈಗಾಗಲೇ UUCMS ನಲ್ಲಿ ಪ್ರಕಟಿಸಲಾಗಿದೆ. ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನದ ಅರ್ಜಿಗಳನ್ನು ಸಲ್ಲಿಸುವ ವಿದ್ಯಾರ್ಥಿಗಳು ತಮ್ಮ UUCMS ಪೋರ್ಟಲ್ ಮುಖಾಂತರ ಅರ್ಜಿಗಳನ್ನು ಹಾಗೂ ಶುಲ್ಕವನ್ನು ಭರಿಸಿ ತಮ್ಮ ಮಹಾವಿದ್ಯಾಲಯದ ಪ್ರಾಂಶುಪಾಲರುಗಳ ಮುಖಾಂತರ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

ಮರುಮೌಲ್ಯಮಾಪನಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವವರು ವಿಷಯದ ಪ್ರತಿ ಪತ್ರಿಕೆಗೆ ಈ ಕೆಳಗೆ ನಮೂದಿಸಿದಂತೆ ಶುಲ್ಕ ಭರಿಸಬೇಕು.ಎಲ್ಲಾ ಪ್ರಾಂಶುಪಾಲರು ಈ ಅಧಿಸೂಚನೆಯ ಪ್ರತಿಯನ್ನು ಸೂಚನಾ ಫಲಕಕ್ಕೆ ಪ್ರಕಟಿಸಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

| ಕೋರ್ಸ | ಫೋಟೊ ಪ್ರತಿ | ಮರು ಎಣಿಕೆ + ಮರುಮೌಲ್ಯಮಾಪನ ಶುಲ್ಕ(ಸೂಚನೆ 2 ಪ್ರಕಾರ) | |
|---|---|---|---|
| ಬಿ.ಸಿ.ಎ./ಬಿ.ಬಿ.ಎ. | **Rs. 750/- per paper** | **Rs. 300/- per paper** | **Rs. 2200/- per paper** |
| ಬಿ.ಎ/ಬಿ.ಕಾಂ./ಬಿ.ಎಸ್ಸಿ. | **Rs. 400/- per paper** | **Rs. 200/- per paper** | **Rs. 1300/- per paper** |

| ಕೋರ್ಸ್ | ಫೋಟೋ ಪ್ರತಿ | | ಮರುಮೌಲ್ಯಮಾಪನ | |
|---|---|---|---|---|
| ಬಿ.ಎ/ಬಿ.ಕಾಂ./ಬಿ.ಎಸ್ಸಿ/ಬಿ.ಸಿ.ಎ. /ಬಿ.ಬಿ.ಎ. | ಆರಂಭದ ದಿನಾಂಕ | ಕೊನೆಯ ದಿನಾಂಕ | ಆರಂಭದ ದಿನಾಂಕ | ಕೊನೆಯ ದಿನಾಂಕ |
| | 08.05.2025 | 11.05.2025 | 12.05.2025 | 18.05.2025 |

7/5/25

ಕುಲಸಚಿವರು (ಮೌಲ್ಯಮಾಪನ)
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು

**ಸೂಚನೆಗಳು:**

1. ಕೇವಲ ಉತ್ತರ ಪತ್ರಿಕೆಯ ನಕಲು ಪ್ರತಿ ಬೇಕಾದಲ್ಲಿ ನಿಗದಿತ ಶುಲ್ಕ ಭರಿಸಿ ಪಡೆಯಬಹುದಾಗಿದೆ.
2. ಮರುಮೌಲ್ಯಮಾಪನ ಮಾಡಬಯಸುವವರು ಮರು ಎಣಿಕೆ ಮತ್ತು ಮರುಮೌಲ್ಯಮಾಪನ ಮಾಡಿಸುವ ಶುಲ್ಕ ಭರಿಸುವುದು ಕಡ್ಡಾಯವಾಗಿರುತ್ತದೆ.
3. UUCMS ಪೋರ್ಟಲ್‌ನಲ್ಲಿ ಶುಲ್ಕ ಭರಿಸಲು ನಿಗದಿತ ವಿಧಾನವಿರುತ್ತದೆ. ತಮಗೆ ಬೇಕಾದ್ದನ್ನು ಆಯ್ಕೆ ಮಾಡಿಕೊಂಡು ಭರಿಸಬಹುದು. ಶುಲ್ಕ ಭರಿಸಿದ ಪ್ರತಿ ಅರ್ಜಿಗೆ ಲಗತ್ತಿಸುವುದು ಕಡ್ಡಾಯ.
4. ಅಂಕಪಟ್ಟಿಯ ಪ್ರತಿ ಅಂತರ್ಜಾಲದಿಂದ ಪಡೆದು ಅರ್ಜಿಗೆ ಲಗತ್ತಿಸತಕ್ಕದ್ದು.

**ವಿಶೇಷ ಸೂಚನೆ:** ಕೊನೆಯ ದಿನಾಂಕ ಮುಗಿದ ಎರಡು ದಿನಗಳೊಳಗಾಗಿ ಆಯಾ ಕಾಲೇಜಿನ ಪ್ರಾಚಾರ್ಯರು ಎಲ್ಲ ವಿದ್ಯಾರ್ಥಿಗಳಿಂದ ಮಾಹಿತಿಯನ್ನು ಪಡೆದು ಕ್ರೋಢಿಕರಿಸಿ ಕುಲಸಚಿವರು(ಮೌಲ್ಯಮಾಪನ), ಪರೀಕ್ಷಾ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಇವರ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು.

**ಗೆ,**

ರಾಯಚೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಸಂಲಗ್ನತೆ ಹೊಂದಿದ ಎಲ್ಲಾ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ, ಸದರಿ ವಿಷಯವನ್ನು ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚಿಸಿದೆ.

**ಪ್ರತಿಗಳು:**

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರು ಅವರ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2. ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
3. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
4. ಶೈಕ್ಷಣಿಕ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
5. ಕಛೇರಿ ಪ್ರತಿ.